ಭಾಗದ ಜನರಿಗೆ ಮುಂದಿನ ಸಚಿವ ಸಂಪುಟದಲ್ಲಿ ಒಪ್ಪಿಗೆ ತೆಗೆದುಕೊಂಡು ನೇಮಕಾತಿ ಮಾಡುವುದಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ರಿಸರ್ವೇಷನ್ ಮತ್ತು ರೋಸ್ಟರ್ ಸಿಸ್ಟಮ್ ಫಾಲೋ ಮಾಡುತ್ತೀರಿ ತಾನೇ?

ಶ್ರೀ ಎಂ. ಚಂದ್ರಶೇಖರ್.—ಆದರ ಪ್ರಕಾರ ಮಾಡುತ್ತೇವೆ.

(ಹಲವಾರು ಸದಸ್ಯರು ಮತ್ತೆ ಉಪ ಪ್ರಶ್ನೆಗಳನ್ನು ಕೇಳಲು ಎದ್ದು ನಿಂತರು)

ಅಧ್ಯಕ್ಷರು.—ಈಗಾಗಲೇ ಅರ್ಧ ಘಂಟೆ ಆಯಿತು. ಐದು ಪ್ರಶ್ನೆ ಮಾತ್ರ ಮುಗಿದಿದೆ. ನಿಮಗೆ ಬೇಕಾದರೆ ಅರ್ಧ ಘಂಟೆ ಚರ್ಚೆಗೆ ನೋಟೀಸ್ ಕೊಡಿ. ಈಗ ಈ ಮ್ಯಾಟರ್ ಮುಗಿದಿದೆ. ತಾವು ಕೂಡ್ರಿ.

ಶ್ರೀ ಎ. ಎಂ. ಹಿಂಡಸಗೇರಿ.—ನಮ್ಮಲ್ಲಿ ಸಮಿತಿ ಮಾಡಿ ಅರ್ಜಿ ತೆಗೆದುಕೊಂಡು ಪರಿಶೀಲನೆ ಮಾಡಿದ್ದರು. ಅದನ್ನು ಈಗ ರದ್ದು ಮಾಡಿದ್ದಾರೆ,

ಅಧ್ಯಕ್ಷರು.—ಇದಿನಬ್ಬನವರೇ ತಾವು ಪ್ರಶ್ನೆ ಕೇಳಿ.

ದಕ್ಷಿಣ ಕನ್ನಡ ಜಿಲ್ಲೆಯಂ ಕಡಲಂ ಕೊರೆತದ ಬಗ್ಗೆ

937 (3044) ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ದಕ್ಷಿಣ ಕರಾವಳಿಯಲ್ಲಿ ಕಡಲು ಕೊರೆತದಿಂದ ಬಡವರಿಗೆ ಮತ್ತು ಮೀನುಗಾರರಿಗೆ ಭಾರೀ ಹಾನಿಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಕಡಲು ಕೊರೆತ ತಡೆಯುವ ಸಲುವಾಗಿ ತಡೆಗೋಡೆ ನಿರ್ಮಾಣ ಮಾಡಲು ಸರ್ಕಾರದವರು ಶೀಘ್ರ ಕ್ರಮ ಕೈಗೊಳ್ಳುವರೇ?

ಇ) ಉಳ್ಳಾಲದಲ್ಲಿ ಈಗಾಗಲೇ ತುಂಬಾ ಕಷ್ಟನಷ್ಟ ಕಡಲು ಕೊರೆತದಿಂದ ಆಗಿದ್ದು, ಈ ವರ್ಷ ವಿಪರೀತ ಕಡಲು ಒಳಗೆ ಬಂದಿರುವುದರಿಂದ ತಡೆಗೋಡೆ ಕಟ್ಟಲು ಸರ್ಕಾರವು ಯಾವ ಆದೇಶ ನೀಡುವುದೇ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಸಚಿವರು).—

ಅ) ಹೌದು.

ಆ) ತೆಗೆದುಕೊಂಡಿದೆ.

ಇ) ಈ ಕಾಮಗಾರಿಯ ಅಂದಾಜಿಗೆ ಮಂಜೂರಾತಿ ನೀಡಲಾಗಿದ್ದು, ಗುತ್ತಿಗೆದಾರರನ್ನೂ ಸಹ ನೇಮಕ ಮಾಡಲಾಗಿದೆ.

ಶ್ರೀ ಬಿ.ಎಂ. ಇದಿನಬ್ಬ.—ಅಧ್ಯಕ್ಷರೆ, 'ಅ' ಪ್ರಶ್ನೆಗೆ ಉತ್ತರಿಸುತ್ತಾ ತೆಗೆದುಕೊಂಡಿದೆ ಎಂದು ತಿಳಿಸಿದ್ದಾರೆ. ಕಳೆದ ಮೂರು ವರ್ಷಗಳಿಂದಲೂ ವಿಧಾನ ಮಂಡಲದಲ್ಲಿ ಪ್ರಸ್ತಾಪ ಮಾಡಿ ಕರಾವಳಿಯಲ್ಲಿ ತಡೆಗೋಡೆ ಹಾಕಬೇಕೆಂದು ಕೇಳುತ್ತಿದ್ದೇವೆ. ಆದರೆ ಅದನ್ನು ಮಾಡಿಲ್ಲ. ಕರಾವಳಿಯಲ್ಲಿ ಶಾಶ್ವತವಾದ ತಡೆಗೋಡೆ ಮಾಡುವ ಕೆಲಸ ಇನ್ನೂ ಪ್ರಾರಂಭವಾಗಿಲ್ಲದೇ ಇರುವುದು ನಿಜವಲ್ಲವೇ ?

ಶ್ರೀ ಹೆಚ್.ಡಿ. ದೇವೇಗೌಡ.—ಕ್ರಮ ತೆಗೆದುಕೊಂಡಿದೆ ಎಂದು ಹೇಳಿದರೆ ಏನು ಎಂಬುದನ್ನು ಓದಿಬಿಡುತ್ತೇನೆ. The see coast near Ullal has been severely affected for a length of 150 metres during this year. The protective work in this area at a cost of Rs. 9.20 lakhs has been included in the Budget estimates of 1988-89 with a grant of Rs. 3 lakhs. The estimate for this work has been sanctioned and the agency also has been fixed. The work will be taken up after Monsoon.

ಇದು ನನ್ನ ಮುಂದಿರುವ ವರದಿ. ಈಗ ಮಳೆಗಾಲ ಕಡಿಮೆಯಾ ಮೇಲೆ ಕೆಲಸ ಶುರು ಮಾಡುತ್ತೇವೆ ಎಂದು ಹೇಳಿದ್ದೇನೆ. ವರ್ಕ್ ಸ್ಯಾಂಕ್ಷನ್ ಆಗಿದೆ. ಮಾನ್‌ಸೂನ್ ಆದ ಮೇಲೆ ಕೆಲಸ ಶುರು ಮಾಡಿಸುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ.—ಆದೇರೀತಿ ಉಲ್ಲಾಳದ ಬಗ್ಗೆ ಕೂಡ ಕೆಲಸ ಮಂಜೂರಾಗಿದೆ. ಮತ್ತೆ ಈ ಕೆಲಸಕ್ಕೂ ಕೂಡ ಕಂಟ್ರಾಕ್ಟ್‌ಗಳನ್ನು ನೇಮಕ ಮಾಡಲಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅಲ್ಲಿ ತುಂಬಾ ಮನೆಗಳು ಇದ್ದು ಈ ಸಾರಿ ಬುದಂತಹ ಮಳೆಯಿಂದ ಬಹಳಷ್ಟು ಮನೆಗಳು ಕೊಚ್ಚಿ ಹೋಗಿವೆ. ಅಲ್ಲೂ ಕೂಡ ಆದಷ್ಟು ಬೇಗ ಕೆಲಸ ಶುರು ಮಾಡುವಂತೆ ಸಂಬಂಧ ಪಟ್ಟವರಿಗೆ ಸ್ಪಷ್ಟ ಸೂಚನೆ ಕೊಡಬೇಕು. ಅಲ್ಲಿರುವಂತಹ ಅಧಿಕಾರ ವರ್ಗದವರು ಅಷ್ಟು ನಿಗಾ ವಹಿಸುತ್ತಾರೆಂದು ನನಗೆ ಧೈರ್ಯ ಇಲ್ಲ. ಆದ್ದರಿಂದ ತಾವು ಆ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ ಬೇಗ ಕೆಲಸವನ್ನು ಶುರು ಮಾಡುವಂತೆ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಬೇಕು.

ಶ್ರೀ ಹೆಚ್.ಡಿ. ದೇವೇಗೌಡ.—ವಿಳಂಬ ಮಾಡದೆ ಕೆಲಸವನ್ನು ಶುರು ಮಾಡಿಸುತ್ತೇನೆ.

ಹೈದರಾಬಾದ್ ವೇತನ ಶ್ರೇಣಿಯ ಮರು ವಸೂಲಾತಿ ಕುರಿತು

೯೩೮ (೨೯೮೦) ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಉತ್ತರ ಕರ್ನಾಟಕ ಪ್ರದೇಶದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ೧೯೬೮ ರಿಂದ ಹೈದರಾಬಾದ್ ವೇತನ ಶ್ರೇಣಿಯನ್ನು ಸರ್ಕಾರ ನೀಡುತ್ತಿರುವುದು ನಿಜವೇ ?

ಆ) ಈಗ ಅದನ್ನೆಲ್ಲಾ ತಿರುಗಿ ವಸೂಲು ಮಾಡುವಂತೆ ಆದೇಶ ಹೊರಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಯಾವ ಆಧಾರದ ಮೇಲೆ ಈ ಮರು ವಸೂಲಾತಿ ಕ್ರಮ ಕೈಗೊಳ್ಳಲಾಗಿದೆ ?

ಈ) ಹಾಗಿದ್ದಲ್ಲಿ, ಈ ಆಜ್ಞೆಯನ್ನು ವಾಪಸ್ ಪಡೆಯಲು ಸರ್ಕಾರವು ಕ್ರಮ ಕೈಗೊಳ್ಳಲು ಉದ್ದೇಶಿಸಿದೆಯೇ ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಸಚಿವರು).—

ಅ) ದಿನಾಂಕ ೧-೧೧-೧೯೫೬ ರಿಂದ ದಿನಾಂಕ ೩೧-೧೨-೧೯೬೯ರ ಅವಧಿಯಲ್ಲಿ ಸೇವೆಯಲ್ಲಿದ್ದ ಸೇವೆಗೆ ಸೇರಿದ ರಾಜ್ಯವ್ಯಾಪ್ತಿ ಎಲ್ಲಾ ರಾಜ್ಯ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಹೈದರಾಬಾದ್ ವೇತನ ಶ್ರೇಣಿಯನ್ನು ಮಂಜೂರು ಮಂಜೂರು ಮಾಡಲಾಗಿದೆ.

ಆ) ವಸೂಲಿ ಮಾಡುವ ಬಗ್ಗೆ ಆದೇಶ ಹೊರಡಿಸಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಈಗ ಹೈದರಾಬಾದ್ ವೇತನ ಶ್ರೇಣಿಯನ್ನು ಪಡೆದ ಪ್ರಾಥಮಿಕ ಶಿಕ್ಷಕರ ಕಡೆಯಿಂದ ಹಣವನ್ನು ವಾಪಸ್ಸು ಪಡೆಯುವ ಬಗ್ಗೆ ಸರ್ಕಾರ ಆದೇಶವನ್ನು ಹೊರಡಿಸಿಲ್ಲ ಮೇಲು ಮಾನ್ಯ ಶಿಕ್ಷಣ ಮಂತ್ರಿಗಳು ಹೇಳಿದ್ದಾರೆ. ಆದರೆ ಉತ್ತರ ಕರ್ನಾಟಕ ಭಾಗದ ಪ್ರಾಥಮಿಕ ಶಿಕ್ಷಕರ ವೃಂದದಲ್ಲಿ ಈ ಬಗ್ಗೆ ಒಂದು ದೊಡ್ಡ ಗೊಂದಲ ಹಬ್ಬಿದೆ. ಪೆಬ್ರವರಿ ೫ನೇ ತಾರೀಖು ನಡೆದಂತಹ ಶಿಕ್ಷಕರ ದಿನಾಚರಣೆಯ ಸಮಾರಂಭದಲ್ಲಿ ನಾನು ಬೀಳಗಿ ಹಾಗೂ ಜಮಖಂಡಿಯಲ್ಲಿ ನಡೆದಂತಹ ಸಭೆಗಳಲ್ಲಿ ಭಾಗವಹಿಸಿದ್ದೆ. ಆ ಒಂದು ಸಮಾರಂಭದಲ್ಲಿ ಶಿಕ್ಷಕರಿಗೆ ಸನ್ಮಾನ ಮಾಡುವಾಗ ಶಾಲು ಹೊದಿಸಿ ಸನ್ಮಾನ ಮಾಡಲಾಯಿತು. ಶಾಲು ಹೊದಿಸುವಾಗ ಆ ಶಿಕ್ಷಕರು ನಮಗೆ ಹಿಂದೆ ನೀಡಿದಂತಹ ಹೈದರಾಬಾದ್ ವೇತನ ಶ್ರೇಣಿಯನ್ನು ನಮ್ಮಗಳಿಂದ ವಸೂಲು ಮಾಡಿಸ್ತಿದ್ದಾರೆ, ನೀವು ನಮ್ಮಗಳಿಗೆ ಶಾಲು ಹೊದಿಸಿ ಹಿಂಸಿಸಬೇಡಿ. ಇದರಿಂದಾಗಿ ನಮಗೆ ಬರಬೇಕಾಗಿದ್ದಂತಹ ಪೆನ್ಷನ್, ಗ್ರಾಚ್ಯುಟಿ ಮುಂತಾದವುಗಳನ್ನು ತಡೆಹಿಡಿದ್ದಾರೆ ಎಂದು ಹೇಳಿದರು. ಆ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿದರು. ಬಹಳ ಸಂತೋಷ. ಆದರೆ ಕೆಲವೊಮ್ಮೆ ಮಂತ್ರಿಗಳಿಗೆ ತಿಳಿಯದೇ ಐ.ಎ.ಎಸ್.